# ಕರ್ನಾಟಕ ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1979

(ಕರ್ನಾಟಕ ರಾಜ್ಯಪತ್ರ, ಗುರುವಾರ, ಅಕ್ಟೋಬರ್ 1, 2009, ಭಾಗ – IVಎ, 694 ರಿಂದ 700ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಭೂ ಕಂದಾಯದ ಬಾಕಿಗಳಂತೆ ಕೆಲವು ಬಾಕಿಗಳ ವಸೂಲಿ
4. ಉಳಿಸುವಿಕೆಗಳು
5. ನಿಯಮಗಳನ್ನು ರಚಿಸಲು ಅಧಿಕಾರ
6. ನಿರಸನ ಮತ್ತು ಸಿಂಧುತ್ವ, ಇತ್ಯಾದಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಅಧಿನಿಯಮ 1980ರ 16.–** ವಾಣಿಜ್ಯ ಬ್ಯಾಂಕುಗಳ ಸಾಲ ನೀಡಿಕೆ ಕಾರ್ಯಕ್ರಮಗಳಲ್ಲಿ, ಅದರಲ್ಲೂ ವಿಶೇಷವಾಗಿ ಸರ್ಕಾರದ ಉದ್ದೇಶಗಳೊಂದಿಗೆ ನಿಕಟವಾಗಿ ಪರಸ್ಪರ ಸಂಬಂಧ ಹೊಂದಿರುವ ಸಾಲ ನೀಡಿಕೆ ಕಾರ್ಯಕ್ರಮಗಳಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ನೆರವು ನೀಡಲು ಕರ್ನಾಟಕ ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1976ನ್ನು ಅಧಿನಿಯಮಿತಿಗೊಳಿಸಲಾಗಿತ್ತು ಮತ್ತು ಸರ್ಕಾರವು "ರಾಜ್ಯ ಪುರಸ್ಕೃತ ಕಾರ್ಯಯೋಜನೆ"ಗಳೆಂದು ಅಧಿಸೂಚಿಸಿದ ಕಾರ್ಯಯೋಜನೆಗಳಿಗೆ ವಾಣಿಜ್ಯ ಬ್ಯಾಂಕುಗಳು ಸಾಲ ನೀಡಿರುವಷ್ಟರ ಮಟ್ಟಿಗೆ ಆ ಸಾಲಗಳನ್ನು ಭೂಕಂದಾಯದ ಬಾಕಿಗಳಂತೆ ವಸೂಲಿ ಮಾಡಲು ಆ ಅಧಿನಿಯಮದಲ್ಲಿ ಉಪಬಂಧ ಕಲ್ಪಿಸಲಾಗಿತ್ತು. ಈ ಅಧಿನಿಯಮವನ್ನು ಜಾರಿಗೊಳಿಸುವಾಗ "ಸಾಮಾಜಿಕವಾಗಿ ಅಪೇಕ್ಷಣೀಯವಾದ ಕಾರ್ಯಯೋಜನೆ"ಗಳೆಂದು ಸರ್ಕಾರವು ಪರಿಗಣಿಸಿರುವ ಇತರ ಅನೇಕ ಯೋಜನೆಗಳಿವೆಯೆಂಬುದು ತಿಳಿದುಬಂದಿದೆ. ಅವುಗಳಲ್ಲಿ, ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ಹಣಕಾಸಿನ ಪಾಲ್ಗೊಳ್ಳುವಿಕೆ ಇಲ್ಲದಿರಬಹುದು. ಆದರೂ, ಅವು ಸರ್ಕಾರದ ಉದ್ದೇಶಗಳ ಈಡೇರಿಕೆಗೆ ಅತ್ಯಾವಶ್ಯಕ ಮತ್ತು ಈ ಕಾರ್ಯಕ್ರಮಗಳಿಗೆ ಬೆಂಬಲ ನೀಡಲು ವಾಣಿಜ್ಯ ಬ್ಯಾಂಕುಗಳನ್ನು ಪ್ರೋತ್ಸಾಹಿಸಬೇಕಾಗಿದೆ. ಈ ಬಗ್ಗೆ ಅಂಥ ಒಂದು ಸಮನ್ವಯವನ್ನು ಸಾಧಿಸುವ ದೃಷ್ಟಿಯಿಂದ, ಸಾಮಾಜಿಕವಾಗಿ ಅಪೇಕ್ಷಣೀಯವಾದ ಕಾರ್ಯಯೋಜನೆಗಳನ್ನು, ಅವುಗಳ ಪರಿಭಾಷೆಯನ್ನು ಮತ್ತು ಒಳಾಂಶಗಳನ್ನು ಸೇರಿಸಿ ಈ ಅಧಿನಿಯಮಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವಾಗಿದೆ. ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ತಿದ್ದುಪಡಿ ವಿಧೇಯಕವನ್ನು ಕಾನೂನು ಇಲಾಖೆಗೆ ಕಳುಹಿಸಿದಾಗ, ಅದು ಕರ್ನಾಟಕ ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1976ನ್ನು ಅಧಿನಿಯಮಿತಿಗೊಳಿಸುವಾಗ, ಭಾರತ ಸಂವಿಧಾನದ ಏಳನೇ ಅನುಸೂಚಿಯ IIIನೇ ಪಟ್ಟಿಯ 13ನೇ ನಮೂದಿನ ಅಡಿಯಲ್ಲಿ ಬರುವ ಅಸ್ತಿತ್ವದಲ್ಲಿರುವ ಕೇಂದ್ರ ಕಾನೂನಿಗೆ ಸದರಿ ಅಧಿನಿಯಮದ ಕೆಲವು ಉಪಬಂಧಗಳು ವಿರುದ್ಧವಾಗಿದ್ದರೂ, ಭಾರತದ ರಾಷ್ಟ್ರಪತಿಯವರ ಸಮ್ಮತಿ ಪಡೆದಿಲ್ಲವೆಂದು ಮತ್ತು ಆ ಆಧಾರದ ಮೇಲೆ ಈ ಅಧಿನಿಯಮದ ಸಿಂಧುತ್ವವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತೆಂದು ಅಭಿಪ್ರಾಯಪಟ್ಟಿದೆ. ಈ ನ್ಯೂನ್ಯತೆಯನ್ನು ಸರಿಪಡಿಸಲು ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1976ರ ಅಡಿಯಲ್ಲಿ ಕೈಗೊಂಡ ಕ್ರಮವನ್ನು ಸಿಂಧುಗೊಳಿಸುವ ಉಪಬಂಧದ ಸಹಿತ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಹೊಸ ಅಧಿನಿಯಮವನ್ನು ಘೋಷಿಸುವುದು ಅವಶ್ಯಕವಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ– IV–2ಎ ದಿನಾಂಕ 16ನೇ ಮೇ, 1979 ರಲ್ಲಿ ಪುಟ 8–9 ರಲ್ಲಿ ಸಂಖ್ಯೆ. 471 ರಲ್ಲಿ ಪ್ರಕಟಿಸಲಾಗಿದೆ.)

**II**

**ತಿದ್ದುಪಡಿ ಮಾಡುವ ಅಧಿನಿಯಮ 1981ರ 48.–** ವಾಣಿಜ್ಯ ಬ್ಯಾಂಕುಗಳ ಸಾಲ ನೀಡಿಕೆ ಕಾರ್ಯಕ್ರಮಗಳಲ್ಲಿ, ಅದರಲ್ಲೂ ವಿಶೇಷವಾಗಿ ಸರ್ಕಾರದ ಉದ್ದೇಶಗಳೊಂದಿಗೆ ನಿಕಟವಾಗಿ ಪರಸ್ಪರ ಸಂಬಂಧ ಹೊಂದಿರುವ ಸಾಲ ನೀಡಿಕೆ ಕಾರ್ಯಕ್ರಮಗಳಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ನೆರವು ನೀಡಲು, ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1979ನ್ನು ಅಧಿನಿಯಮಿತಿಗೊಳಿಸಲಾಗಿತ್ತು.

ಭಾರತ ಸರ್ಕಾರದ ಗೃಹ ವ್ಯವಹಾರಗಳ ಮಂತ್ರಾಲಯವು ಸದರಿ ಶಾಸನಕ್ಕೆ ರಾಷ್ಟ್ರಪತಿಯವರ ಸಮ್ಮತಿ ದೊರೆತಿರುವುದನ್ನು ತಿಳಿಸುವಾಗ, 'ಬ್ಯಾಂಕಿಂಗ್ ಕಂಪನಿ'ಯ ಪರಿಭಾಷೆಯನ್ನು ಈ ವಿಧೇಯಕದಲ್ಲಿ ಈಗ ಪ್ರಸ್ತಾಪಿಸಿರುವಂತೆ ತಿದ್ದುಪಡಿ ಮಾಡಬಹುದೆಂದು ಸೂಚಿಸಿತ್ತು.

ಆದ್ದರಿಂದ ಈ ವಿಧೇಯಕ,

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ – IV - 2ಎ ದಿನಾಂಕ 3ನೇ ಫೆಬ್ರವರಿ, 1981ರಲ್ಲಿ ಪುಟ 4 ರಲ್ಲಿ ಸಂಖ್ಯೆ. 103 ರಲ್ಲಿ ಪ್ರಕಟಿಸಲಾಗಿದೆ.)

**III**

**ತಿದ್ದುಪಡಿ ಮಾಡುವ ಅಧಿನಿಯಮ 1985ರ 37.–** ಈ ವಿಧೇಯಕವು, ಈ ಮುಂದಿನ ಉದ್ದೇಶಗಳಿಗಾಗಿ ಕರ್ನಾಟಕ ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1979ನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸುತ್ತದೆ.

**ಖಂಡ 3**.– ಇನ್ನು ಮುಂದೆ ಬಡ್ಡಿಯನ್ನು ಯಾವ ದರದಲ್ಲಿ ವಸೂಲಿ ಮಾಡಬೇಕೆಂಬುದನ್ನು ನಿರ್ದಿಷ್ಟಪಡಿಸುವುದು.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ – IV– 2ಎ ದಿನಾಂಕ 5ನೇ ಆಗಸ್ಟ್, 1985 ರಲ್ಲಿ ಪುಟ 2 ರಲ್ಲಿ ಸಂಖ್ಯೆ. 426 ರಲ್ಲಿ ಪ್ರಕಟಿಸಲಾಗಿದೆ.)

**ಕರ್ನಾಟಕ ಅಧಿನಿಯಮ ಸಂಖ್ಯೆ 1980ರ 16**

(1980ರ ಏಪ್ರಿಲ್ ಇಪ್ಪತ್ತನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

## ಕರ್ನಾಟಕ ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1979

(1980ರ ಏಪ್ರಿಲ್ ಹದಿನೆಂಟನೇ ದಿನಾಂಕದಂದು ರಾಷ್ಟ್ರಪತಿಯವರ ಸಮ್ಮತಿ ಪಡೆದಿದೆ)

(1981ರ ಅಧಿನಿಯಮ 48ರ ಮತ್ತು 1985ರ 37ರ ಮೂಲಕ ತಿದ್ದುಪಡಿಯಾದಂತೆ)

ಕೆಲವು ವರ್ಗಗಳ ಬಾಕಿಗಳನ್ನು ಶೀಘ್ರವಾಗಿ ವಸೂಲು ಮಾಡಲು ಉಪಬಂಧ ಕಲ್ಪಿಸುವ ಅಧಿನಿಯಮ.

ಕೆಲವು ವರ್ಗಗಳ ಬಾಕಿಗಳನ್ನು ಶೀಘ್ರವಾಗಿ ವಸೂಲು ಮಾಡಲು ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1979 ಎಂದು ಕರೆಯತಕ್ಕದ್ದು.

(2) 6ನೇ ಪ್ರಕರಣವು ಕೂಡಲೇ ಜಾರಿಗೆ ಬರತಕ್ಕದ್ದು. ಇತರ ಪ್ರಕರಣಗಳು, 1976ರ ಜೂನ್ ಹದಿನೈದನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

[1][(ಎ)] "ಬ್ಯಾಂಕಿಂಗ್ ಕಂಪನಿ" ಎಂದರೆ,–

(i) ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (ಕೇಂದ್ರ ಅಧಿನಿಯಮ 1949ರ 10) ರಲ್ಲಿ ಪರಿಭಾಷಿಸಿರುವ ಬ್ಯಾಂಕಿಂಗ್ ಕಂಪನಿ;

(ii) ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 (ಕೇಂದ್ರ ಅಧಿನಿಯಮ 1955ರ 23)ರ ಮೇರೆಗೆ ಸ್ಥಾಪಿಸಲಾದ ಭಾರತೀಯ ಸ್ಟೇಟ್ ಬ್ಯಾಂಕ್;

(iii) ಭಾರತೀಯ ಸ್ಟೇಟ್ ಬ್ಯಾಂಕ್ (ಅಧೀನ ಬ್ಯಾಂಕುಗಳು) ಅಧಿನಿಯಮ, 1959 (ಕೇಂದ್ರ ಅಧಿನಿಯಮ, 1959ರ 38) ರಲ್ಲಿ ಪರಿಭಾಷಿಸಿರುವ ಸಹಾಯಕ ಬ್ಯಾಂಕ್‌ಗಳು;

(iv) ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (ಕೇಂದ್ರ ಅಧಿನಿಯಮ 1970ರ 5)ರ ಮೇರೆಗೆ ಸ್ಥಾಪಿಸಲಾದ ಸಂವಾದಿ ಹೊಸ ಬ್ಯಾಂಕ್;

(v) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧಿನಿಯಮ, 1976 (ಕೇಂದ್ರ ಅಧಿನಿಯಮ 1976ರ 21)ರ ಮೇರೆಗೆ ಸ್ಥಾಪಿಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್;

(vi) ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (ಕೇಂದ್ರ ಅಧಿನಿಯಮ 1980ರ 40)ರ ಮೇರೆಗೆ ಸ್ಥಾಪಿಸಲಾದ ಸಂವಾದಿ ಹೊಸ ಬ್ಯಾಂಕ್;

(vii) ಕೃಷಿ ಪುನರ್ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಅಧಿನಿಯಮ, 1963 (ಕೇಂದ್ರ ಅಧಿನಿಯಮ 1963ರ 10)ರ ಮೇರೆಗೆ ಸ್ಥಾಪಿಸಲಾದ ಕೃಷಿ ಪುನರ್ ಹಣಕಾಸು ಮತ್ತು ಅಭಿವೃದ್ಧಿ ನಿಗಮ; ಮತ್ತು

1. ಅಧಿನಿಯಮ 1981ರ 48ರ ಮೂಲಕ 15.6.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(viii) ಭಾರತೀಯ ಕಂಪನಿಗಳ ಅಧಿನಿಯಮ, 1956 (ಕೇಂದ್ರ ಅಧಿನಿಯಮ 1956ರ 1)ರ ಮೇರೆಗೆ ಕೃಷಿ ಹಣಕಾಸು ನಿಗಮ ನಿಯಮಿತ ಎಂದು ನಿಗಮಿತಗೊಳಿಸಿದ ಕಂಪನಿ

– ಎಂದು ಅರ್ಥ.

(ಬಿ) "ನಿಗಮ" ಎಂದರೆ ರಾಜ್ಯ ಹಣಕಾಸು ನಿಗಮ ಅಧಿನಿಯಮ, 1951ರ ಮೇರೆಗೆ ಸ್ಥಾಪಿಸಲಾದ ಕರ್ನಾಟಕ ರಾಜ್ಯ ಹಣಕಾಸು ನಿಗಮ ಎಂದು ಅರ್ಥ ಮತ್ತು ಅದು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿ ಇರುವ ಅಥವಾ ಅದರ ನಿಯಂತ್ರಣದಲ್ಲಿರುವ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಯಾವುದೇ ನಿಗಮವನ್ನು ಒಳಗೊಳ್ಳುತ್ತದೆ.

(ಸಿ) "ಹಣಕಾಸು ನೆರವು" ಎಂದರೆ,–

(i) ಯಾವುದೇ ಕೈಗಾರಿಕಾ ಉದ್ಯಮವನ್ನು ಸ್ಥಾಪಿಸುವುದಕ್ಕಾಗಿ, ವಿಸ್ತರಿಸುವುದಕ್ಕಾಗಿ, ಆಧುನೀಕರಣಗೊಳಿಸುವುದಕ್ಕಾಗಿ, ನವೀಕರಣ ಮಾಡುವುದಕ್ಕಾಗಿ ಅಥವಾ ನಡೆಸುವುದಕ್ಕಾಗಿ; ಅಥವಾ

(ii) ವೃತ್ತಿ ಶಿಕ್ಷಣ ತರಬೇತಿಯ ಉದ್ದೇಶಗಳಿಗಾಗಿ; ಅಥವಾ

(iii) ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಅಥವಾ ಕೃಷಿ ಉದ್ಯಮದ ಅಭಿವೃದ್ಧಿಗಾಗಿ; ಅಥವಾ

(iv) ಇತರ ಯಾವುದೇ ರೀತಿಯ ಯೋಜಿತ ಅಭಿವೃದ್ಧಿಯ ಉದ್ದೇಶಗಳಿಗಾಗಿ; ಅಥವಾ

(v) ಸಂಕಷ್ಟ ಪರಿಸ್ಥಿತಿಯ ಪರಿಹಾರಕ್ಕಾಗಿ

– ನೀಡುವ ಯಾವುದೇ ಹಣಕಾಸಿನ ನೆರವು ಎಂದು ಅರ್ಥ.

(ಡಿ) "ಸರ್ಕಾರಿ ಕಂಪನಿ" ಎಂದರೆ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದಲ್ಲಿ ಪರಿಭಾಷಿಸಿದ ಸರ್ಕಾರಿ ಕಂಪನಿ ಎಂದು ಅರ್ಥ;

(ಇ) "ಕೈಗಾರಿಕಾ ಸಂಸ್ಥೆ" ಎಂಬುದು ಕಾಲಕಾಲಕ್ಕೆ ತಿದ್ದುಪಡಿಯಾದ ರಾಜ್ಯ ಹಣಕಾಸು ನಿಗಮ ಅಧಿನಿಯಮ, 1951 ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತದೆ.

(ಎಫ್) "ಕೈಗಾರಿಕಾ ಉದ್ಯಮ" ಎಂಬುದು ಸರಕುಗಳ ತಯಾರಿಕೆ, ಸಂರಕ್ಷಣೆ, ದಾಸ್ತಾನು ಅಥವಾ ಸಂಸ್ಕರಣೆಗೆ ಸಂಬಂಧಿಸಿದ ಯಾವುದೇ ಉದ್ಯಮ ಅಥವಾ ಗಣಿ ಉದ್ಯಮ ಅಥವಾ ಹೋಟೆಲ್ ಉದ್ಯಮ ಅಥವಾ ಪ್ರಯಾಣಿಕರ ಅಥವಾ ಸರಕುಗಳ ಸಾಗಣೆ ಅಥವಾ ವಿದ್ಯುಚ್ಛಕ್ತಿಯ ಅಥವಾ ಇತರ ಯಾವುದೇ ರೀತಿಯ ಶಕ್ತಿಯ ಉತ್ಪಾದನೆ ಅಥವಾ ವಿತರಣೆ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ಪ್ರದೇಶವನ್ನು ಕೈಗಾರಿಕಾ ಎಸ್ಟೇಟ್ ಆಗಿ ಅಭಿವೃದ್ಧಿಪಡಿಸುವುದು – ಇವುಗಳನ್ನು ಒಳಗೊಳ್ಳುತ್ತದೆ;

**ವಿವರಣೆ.–** "ಸರಕುಗಳ ಸಂಸ್ಕರಣ" ಎಂಬ ಪದಾವಳಿಯು, ಯಾವುದೇ ಪದಾರ್ಥವನ್ನು ಶಾರೀರಿಕ ಶ್ರಮದ, ರಾಸಾಯನಿಕ, ವಿದ್ಯುತ್ ಅಥವಾ ಯಾವುದೇ ಇತರ ಅಂಥದೇ ಕಾರ್ಯಾಚರಣೆಗೆ ಒಳಪಡಿಸುವ ಮೂಲಕ ವಸ್ತುವನ್ನು ಉತ್ಪಾದಿಸುವುದು, ತಯಾರಿಸುವುದು ಅಥವಾ ಮಾಡುವ ಯಾವುದೇ ಸಂಸ್ಕರಣ ಕ್ರಿಯೆಯನ್ನು ಒಳಗೊಳ್ಳುತ್ತದೆ.

(ಜಿ) "ವ್ಯಕ್ತಿ" ಎಂಬುದು ಕಾನೂನುಸಮ್ಮತ ಪ್ರತಿನಿಧಿಯನ್ನು ಅಥವಾ ಹಸ್ತಾಂತರ ಪಡೆದವನನ್ನು ಒಳಗೊಳ್ಳುತ್ತದೆ;

(ಹೆಚ್) "ರಾಜ್ಯ ಪುರಸ್ಕೃತ ಕಾರ್ಯಯೋಜನೆ" ಎಂದರೆ ರಾಜ್ಯ ಸರ್ಕಾರದಿಂದ ಹಣಕಾಸಿನ ನೆರವನ್ನು ಪಡೆದು ಪುರಸ್ಕೃತವಾಗಿರುವ, ಯಾವ ಕಾರ್ಯಯೋಜನೆಯ ಮೇರೆಗೆ ರಾಜ್ಯ ಸರ್ಕಾರವು,–

(i) ಸಾಲಗಳನ್ನು, ಮುಂಗಡಗಳನ್ನು ಅಥವಾ ಅನುದಾನಗಳನ್ನು ವಿತರಿಸುವ ಉದ್ದೇಶಗಳಿಗಾಗಿ ಅಥವಾ ಸಾಲದ ಮೇಲೆ ಅಥವಾ ಕಂತು ಖರೀದಿಯ ಮೇಲೆ ಸರಕುಗಳನ್ನು ಮಾರಾಟ ಮಾಡುವ ಉದ್ದೇಶಗಳಿಗಾಗಿ ಬ್ಯಾಂಕಿಂಗ್ ಕಂಪನಿಗೆ ಅಥವಾ ಸರ್ಕಾರಿ ಕಂಪನಿಗೆ ಹಣವನ್ನು ಒದಗಿಸುವುದೋ;

(ii) ಸಾಲವನ್ನು, ಮುಂಗಡವನ್ನು ಅಥವಾ ಅನುದಾನವನ್ನು ಮರುಸಂದಾಯ ಮಾಡಲು ಅಥವಾ ಸಾಲದ ಮೇಲೆ ಅಥವಾ ಕಂತು ಖರೀದಿಯ ಮೇಲೆ ಮಾರಾಟ ಮಾಡಿದ ಸರಕುಗಳ ಬೆಲೆಯನ್ನು ಸಂದಾಯ ಮಾಡಲು ಖಾತರಿ ನೀಡುವುದೋ ಅಥವಾ ಖಾತರಿ ನೀಡಲು ಒಪ್ಪಿಕೊಳ್ಳುವುದೋ

– ಆ ಕಾರ್ಯಯೋಜನೆ ಎಂದು ಅರ್ಥ;

(ಐ) "ಸಾಮಾಜಿಕವಾಗಿ ಅಪೇಕ್ಷಣೀಯವಾದ ಕಾರ್ಯಯೋಜನೆ" ಎಂದರೆ ರಾಜ್ಯ ಸರ್ಕಾರವು ಸಾಮಾಜಿಕವಾಗಿ ಅಪೇಕ್ಷಣೀಯವಾದ ಕಾರ್ಯಯೋಜನೆಯೆಂದು ಅಧಿಸೂಚಿಸಿದ ಕಾರ್ಯಯೋಜನೆಯ ಮೇರೆಗೆ ಸಾಲದ ರೂಪದಲ್ಲಿ ಯಾರೇ ವ್ಯಕ್ತಿಗೆ ಬ್ಯಾಂಕಿಂಗ್ ಕಂಪನಿಯು ಹಣವನ್ನು ನೀಡುವುದೋ ಆ ಕಾರ್ಯಯೋಜನೆ ಎಂದು ಅರ್ಥ.

**3. ಭೂ ಕಂದಾಯದ ಬಾಕಿಗಳಂತೆ ಕೆಲವು ಬಾಕಿಗಳ ವಸೂಲಿ.–** (1) ಯಾರೇ ವ್ಯಕ್ತಿಯು,–

(ಎ) ಹಣಕಾಸಿನ ನೆರವಿನ ರೂಪದಲ್ಲಿ ರಾಜ್ಯ ಸರ್ಕಾರವು ಅಥವಾ ನಿಗಮವು ಅವನಿಗೆ ನೀಡಿದ ಸಾಲಕ್ಕೆ, ಮುಂಗಡಕ್ಕೆ ಅಥವಾ ಅನುದಾನಕ್ಕೆ ಸಂಬಂಧಿಸಿದ ಅಥವಾ ಅವನಿಗೆ ಮಾರಾಟ ಮಾಡಿದ ಸರಕುಗಳಿಗೆ ಸಂಬಂಧಿಸಿದ ಸಾಲಕ್ಕೆ ಅಥವಾ ಸರಕುಗಳ ಕಂತು ಖರೀದಿಗೆ ಸಂಬಂಧಿಸಿದ ಯಾವುದೇ ಒಪ್ಪಂದಕ್ಕೆ; ಅಥವಾ

(ಬಿ) ರಾಜ್ಯ ಪುರಸ್ಕೃತ ಕಾರ್ಯಯೋಜನೆಯ ಮೇರೆಗೆ, ಬ್ಯಾಂಕಿಂಗ್ ಕಂಪನಿಯು ಅಥವಾ ಸಂದರ್ಭಾನುಸಾರ, ಸರ್ಕಾರಿ ಕಂಪನಿಯು ಅವನಿಗೆ ನೀಡಿದ ಸಾಲಕ್ಕೆ, ಮುಂಗಡಕ್ಕೆ ಅಥವಾ ಅನುದಾನಕ್ಕೆ ಸಂಬಂಧಿಸಿದ ಅಥವಾ ಅವನಿಗೆ ಮಾರಾಟ ಮಾಡಿದ ಸರಕುಗಳಿಗೆ ಸಂಬಂಧಿಸಿದ ಸಾಲಕ್ಕೆ ಅಥವಾ ಸರಕುಗಳ ಕಂತು ಖರೀದಿಗೆ ಸಂಬಂಧಿಸಿದ ಯಾವುದೇ ಒಪ್ಪಂದಕ್ಕೆ; ಅಥವಾ

(ಸಿ) ಯಾವುದೇ ಕೈಗಾರಿಕಾ ಸಂಸ್ಥೆಯು ಎತ್ತಿದ ಸಾಲಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರವು ಅಥವಾ ನಿಗಮವು ನೀಡಿದ ಖಾತರಿಗೆ ಸಂಬಂಧಿಸಿದ ಯಾವುದೇ ಒಪ್ಪಂದಕ್ಕೆ; ಅಥವಾ

(ಡಿ) ಈ ಮೇರೆಗೆ ರಾಜ್ಯ ಸರ್ಕಾರಕ್ಕೆ ಸಂದಾಯವಾಗಬೇಕಾದ ಯಾವುದೇ ಹಣವನ್ನು ಭೂ ಕಂದಾಯದ ಬಾಕಿಗಳಂತೆ ವಸೂಲಿ ಮಾಡಲು ಅವಕಾಶ ಕಲ್ಪಿಸುವ ಯಾವುದೇ ಒಪ್ಪಂದಕ್ಕೆ

– ಪಕ್ಷಕಾರನಾಗಿರುವಲ್ಲಿ ಮತ್ತು ಅಂಥ ವ್ಯಕ್ತಿಯು,–

(ಎ) ಸಾಲವನ್ನು ಅಥವಾ ಮುಂಗಡವನ್ನು ಅಥವಾ ಅದರ ಯಾವುದೇ ಕಂತನ್ನು ಸಂದಾಯ ಮಾಡಲು ತಪ್ಪಿದಲ್ಲಿ; ಅಥವಾ

(ಬಿ) ಅನುದಾನವನ್ನು ಅಥವಾ ಅದರ ಯಾವುದೇ ಭಾಗವನ್ನು ಮರುಪಾವತಿ ಮಾಡಲು ಅನುದಾನದ ಷರತ್ತುಗಳ ಮೇರೆಗೆ ಹೊಣೆಗಾರನಾಗಿದ್ದು, ಅಂಥ ಅನುದಾನವನ್ನು ಅಥವಾ ಅದರ ಭಾಗವನ್ನು ಅಥವಾ ಅದರ ಯಾವುದೇ ಕಂತನ್ನು ಮರುಪಾವತಿ ಮಾಡಲು ತಪ್ಪಿದಲ್ಲಿ; ಅಥವಾ

(ಸಿ) ಒಪ್ಪಂದದ ನಿಬಂಧನೆಗಳನ್ನು ಪಾಲಿಸಲು ಅನ್ಯಥಾ ತಪ್ಪಿದಲ್ಲಿ, ಆಗ,–

(i) ರಾಜ್ಯ ಸರ್ಕಾರದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದ ಅಂಥ ಅಧಿಕಾರಿಯು;

(ii) ನಿಗಮದ ಅಥವಾ ಸರ್ಕಾರಿ ಕಂಪನಿಯ ಸಂದರ್ಭದಲ್ಲಿ, ಅದರ ವ್ಯವಸ್ಥಾಪಕ ನಿರ್ದೇಶಕನು; ಮತ್ತು

(iii) ಬ್ಯಾಂಕಿಂಗ್ ಕಂಪನಿಯ ಸಂದರ್ಭದಲ್ಲಿ, ಯಾವುದೇ ಹೆಸರಿನಿಂದ ಕರೆಯಲಾಗುವ ಅದರ ಸ್ಥಳೀಯ ಏಜೆಂಟನು

– ಅಂಥ ವ್ಯಕ್ತಿಗಳಿಂದ ಬರಬೇಕಾಗಿರುವ ಮೊತ್ತವನ್ನು ನಮೂದಿಸಿರುವ ಮತ್ತು ವ್ಯವಹರಣೆಗಳ ವೆಚ್ಚ ಮತ್ತು ವಸೂಲಿಯ ದಿನಾಂಕದವರೆವಿಗೂ, [1][ಭಾರತ ರಿಸರ್ವ್ ಬ್ಯಾಂಕ್ ಮತ್ತು ಇತರ ಸರ್ಕಾರಿ ಹಣಕಾಸು ಅಥವಾ ಪುನರ್ ಹಣಕಾಸು ಸಂಸ್ಥೆಗಳು ಕಾಲಕಾಲಕ್ಕೆ ಗೊತ್ತುಪಡಿಸಿದ ಪರಿಮಿತಿಯೊಳಗೆ ಒಪ್ಪಿಕೊಂಡ ದರದಲ್ಲಿ][1] ಮುಂದಿನ ಬಡ್ಡಿಯನ್ನು ಒಳಗೊಂಡಂತೆ ಅಂಥ ಮೊಬಲಗನ್ನು ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲಿ ಮಾಡಬೇಕೆಂದು ಕೋರುವ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಯವರಿಗೆ ಕಳುಹಿಸಬಹುದು. ಜಿಲ್ಲಾಧಿಕಾರಿಯವರಿಗೆ ಕಳುಹಿಸಿದ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳಬಹುದು.

1. ಅಧಿನಿಯಮ 1985ರ 37ರ ಮೂಲಕ 21.10.1985 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಜಿಲ್ಲಾಧಿಕಾರಿಯವರು ಪ್ರಮಾಣ ಪತ್ರವನ್ನು ಸ್ವೀಕರಿಸಿದ ಮೇಲೆ, ಅದರಲ್ಲಿ ಹೇಳಿರುವ ಮೊಬಲಗನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

(3) ಬ್ಯಾಂಕಿಂಗ್ ಕಂಪನಿಯು ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಸಾಮಾಜಿಕವಾಗಿ ಅಪೇಕ್ಷಣೀಯವಾದ ಕಾರ್ಯಯೋಜನೆಯ ಮೇರೆಗೆ ಯಾರೇ ವ್ಯಕ್ತಿಗೆ ನೀಡಿದ ಸಾಲಕ್ಕೆ ಸಂಬಂಧಪಟ್ಟಂತೆ ಆ ಯಾರೇ ವ್ಯಕ್ತಿಯಿಂದ ಅದಕ್ಕೆ ಬರಬೇಕಾದ ಯಾವುದೇ ಮೊತ್ತಕ್ಕೆ ಸಂಬಂಧಪಟ್ಟಂತೆ ಲೆಕ್ಕಪತ್ರಗಳ ವಿವರ ಪತ್ರವನ್ನು ಅದು ಒದಗಿಸಿದ ಮೇಲೆ, ನಿಯಮಿಸಿದ ಅಧಿಕಾರಿಯು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ ಮತ್ತು ಅಂಥ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯ, ಬಾಕಿ ಇರುವ ಮೊತ್ತವನ್ನು ನಿರ್ದಿಷ್ಟಪಡಿಸಿ ಪ್ರಮಾಣ ಪತ್ರವನ್ನು ನೀಡಬಹುದು.

(4) ನಿಯಮಿಸಿದ ಅಧಿಕಾರಿಯು ಹಾಗೆ ನೀಡಿದ ಪ್ರಮಾಣ ಪತ್ರವು ಅಂತಿಮವಾದುದಾಗಿರತಕ್ಕದ್ದು ಮತ್ತು ಬ್ಯಾಂಕಿಂಗ್ ಕಂಪನಿಯು ಅದನ್ನು ಜಿಲ್ಲಾಧಿಕಾರಿಯವರಿಗೆ ಕಳುಹಿಸಬಹುದು. ಬಾಕಿಯಿದೆ ಎಂದು ಅದರಲ್ಲಿ ಹೇಳಿದ ಮೊತ್ತವು ಮತ್ತು ವಸೂಲಿಯ ದಿನಾಂಕದವರೆಗೆ ಅದರ ಮೇಲಿನ, [1][ಭಾರತದ ರಿಸರ್ವ್ ಬ್ಯಾಂಕು ಮತ್ತು ಇತರ ಸರ್ಕಾರಿ ಹಣಕಾಸು ಅಥವಾ ಪುನರ್ ಹಣಕಾಸು ಸಂಸ್ಥೆಗಳು ಕಾಲಕಾಲಕ್ಕೆ ಗೊತ್ತುಪಡಿಸಿದ ಪರಿಮಿತಿಯೊಳಗೆ ಒಪ್ಪಿಕೊಂಡ ದರದಲ್ಲಿ][1] ಬಡ್ಡಿಯು ವ್ಯವಹರಣೆಗಳ ವೆಚ್ಚದೊಂದಿಗೆ ಭೂಕಂದಾಯದ ಬಾಕಿಯಂತೆ ವಸೂಲಿ ಮಾಡಬಹುದಾದುದಾಗಿರತಕ್ಕದ್ದು. ಜಿಲ್ಲಾಧಿಕಾರಿಯವರಿಗೆ ಕಳುಹಿಸಿದ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳಬಹುದು.

1. ಅಧಿನಿಯಮ 1985ರ 37ರ ಮೂಲಕ 21.10.1985 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಮೇಲೆ ಹೇಳಿದ ಯಾವುದೇ ಬಾಕಿ ಮೊತ್ತದ ವಸೂಲಿಗಾಗಿ ಅದನ್ನು ವಸೂಲು ಮಾಡುವ ವ್ಯವಹರಣೆಗಳು ಜಿಲ್ಲಾಧಿಕಾರಿಯವರ ಮುಂದೆ ಇತ್ಯರ್ಥದಲ್ಲಿದ್ದರೆ, ಅದರಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ:

ಪರಂತು, ಅಂಥ ಯಾವುದೇ ಮೊತ್ತವನ್ನು ನ್ಯಾಯಾಲಯದ ಮೂಲಕ ವಸೂಲಿ ಮಾಡಲು ಕಾಲಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಾಗ, ಯಾವ ಅವಧಿಯಲ್ಲಿ ದಾವೆಯನ್ನು ನ್ಯಾಯಾಲಯದಲ್ಲಿ ದಾಖಲ್ಮಾಡಲು ಪ್ರತಿಷೇಧಿಸಲಾಗಿದೆಯೋ ಆ ಅವಧಿಯನ್ನು ಹೊರತುಪಡಿಸತಕ್ಕದ್ದು.

**4. ಉಳಿಸುವಿಕೆಗಳು.–** 3ನೇ ಪ್ರಕರಣದಲ್ಲಿ ಇರುವುದು ಯಾವುದೂ,–

(ಎ) ಯಾವುದೇ ಅಡಮಾನ, ಋಣಭಾರ, ಒತ್ತೆ ಅಥವಾ ಇತರ ಪೂರ್ವಾಧಿಯ ಮೂಲಕ ಯಾವುದೇ ಸ್ವತ್ತಿನಲ್ಲಿ ಸೃಜಿಸಲಾದ ರಾಜ್ಯ ಸರ್ಕಾರದ, ನಿಗಮದ, ಸರ್ಕಾರಿ ಕಂಪನಿಯ ಅಥವಾ ಯಾವುದೇ ಬ್ಯಾಂಕಿಂಗ್ ಕಂಪನಿಯ ಯಾವುದೇ ಹಿತಾಸಕ್ತಿಗೆ ಬಾಧಕ ಉಂಟುಮಾಡತಕ್ಕದ್ದಲ್ಲ; ಅಥವಾ

(ಬಿ) ಆ ಪ್ರಕರಣದಲ್ಲಿ ಉಲ್ಲೇಖಿಸಿದ ಒಪ್ಪಂದಕ್ಕೆ ಸಂಬಂಧಿಸಿದಂತೆ ಅಥವಾ (ಎ) ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಹಿತಾಸಕ್ತಿಗೆ ಸಂಬಂಧಿಸಿದಂತೆ ಮಾಡಿಕೊಂಡ ಕರಾರಿಗೆ ಅಥವಾ ನಷ್ಟ ಭರ್ತಿಗೆ ಅಥವಾ ಖಾತರಿಗೆ ಸಂಬಂಧಿಸಿದಂತೆ ಆ ಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಕ್ತಿಯನ್ನು ಹೊರತುಪಡಿಸಿ ಯಾರೇ ವ್ಯಕ್ತಿಯ ಯಾವುದೇ ಹಕ್ಕಿಗೆ ಅಥವಾ ಪರಿಹಾರಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(2) 3ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯ ಸ್ವತ್ತು ರಾಜ್ಯ ಸರ್ಕಾರದ, ನಿಗಮದ, ಸರ್ಕಾರಿ ಕಂಪನಿಯ ಅಥವಾ ಬ್ಯಾಂಕಿಂಗ್ ಕಂಪನಿಯ ಹೆಸರಿಗೆ ಮಾಡಿದ ಯಾವುದೇ ಅಡಮಾನಕ್ಕೆ, ಋಣಭಾರಕ್ಕೆ, ಒತ್ತೆಗೆ ಅಥವಾ ಇತರ ಪೂರ್ವಾಧಿಗೆ ಒಳಪಟ್ಟಿರುವಲ್ಲಿ, ಆಗ,–

(ಎ) ಸರಕುಗಳನ್ನು ಒತ್ತೆ ಇಟ್ಟಿರುವ ಅಥವಾ ಅಡಮಾನ ಮಾಡಿರುವ ಪ್ರತಿಯೊಂದು ಸಂದರ್ಭದಲ್ಲೂ, ಒತ್ತೆ ಇಟ್ಟ ಅಥವಾ ಅಡಮಾನ ಮಾಡಿದ ಸರಕುಗಳ ಮಾರಾಟದ ಬಗ್ಗೆ ಮೊದಲು ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಂಥ ಮಾರಾಟದಿಂದ ಬಂದ ಉತ್ಪತ್ತಿಗಳು ಬಾಕಿ ಇರುವ ಮೊತ್ತಕ್ಕಿಂತ ಕಡಿಮೆಯಿದ್ದರೆ, ಆಗ ಉಳಿದ ಶಿಲ್ಕನ್ನು ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲು ಮಾಡಲು ವ್ಯವಹರಣೆಯನ್ನು ಕೈಗೊಳ್ಳತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಸಂದರ್ಭಾನುಸಾರ, ತನಗೆ ಅಥವಾ ನಿಗಮಕ್ಕೆ, ಸರ್ಕಾರಿ ಕಂಪನಿಗೆ ಅಥವಾ ಬ್ಯಾಂಕಿಂಗ್ ಕಂಪನಿಗೆ ಬರಬೇಕಾದ ಬಾಕಿ ಮೊತ್ತದ ವಸೂಲಿಯನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಒತ್ತೆ ಇಟ್ಟ ಸರಕುಗಳನ್ನು ಮಾರಾಟ ಮಾಡಲು ಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚೆ ಅಥವಾ ಅದೇ ಸಮಯದಲ್ಲಿ ಬಾಕಿ ಇರುವ ಮೊತ್ತವನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಲು ವ್ಯವಹರಣೆಗಳನ್ನು ಕೈಗೊಳ್ಳಬೇಕೆಂದು ನಿರ್ದೇಶಿಸುವುದು ಅವಶ್ಯಕವೆಂದು ಅಭಿಪ್ರಾಯಪಟ್ಟರೆ, ಅದು ಕಾರಣಗಳನ್ನು ದಾಖಲಿಸಿ ಹಾಗೆ ಮಾಡಬಹುದು.

(ಬಿ) ಸ್ಥಿರಸ್ವತ್ತಿನ ಅಡಮಾನ, ಋಣಭಾರ ಅಥವಾ ಇತರ ಪೂರ್ವಾಧಿ ಇರುವ ಪ್ರತಿಯೊಂದು ಸಂದರ್ಭದಲ್ಲಿ, ಸಂದರ್ಭಾನುಸಾರ, ಅಂಥ ಸ್ವತ್ತನ್ನು ಅಥವಾ ಅದರಲ್ಲಿ ಬಾಕಿದಾರನು ಹೊಂದಿರುವ ಹಿತಾಸಕ್ತಿಯನ್ನು, ಆ ವ್ಯಕ್ತಿಯು ಸಂದಾಯ ಮಾಡಬೇಕಾದ ಬಾಕಿ ಮೊತ್ತಕ್ಕಾಗಿ, ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ಅದನ್ನು ವಸೂಲಿ ಮಾಡುವ ವ್ಯವಹರಣೆಗಳಲ್ಲಿ ಮೊದಲು ಅದನ್ನು ಮಾರಾಟ ಮಾಡತಕ್ಕದ್ದು, ಮತ್ತು ಬಾಕಿ ಇರುವ ಇಡೀ ಮೊಬಲಗನ್ನು ಸೂಕ್ತ ಕಾಲದೊಳಗೆ ಮೊದಲು ಹೇಳಿದ ಕಾರ್ಯವಿಧಾನದ ಮೂಲಕ ವಸೂಲು ಮಾಡಲು ಸಾಧ್ಯವಿಲ್ಲವೆಂದು ಜಿಲ್ಲಾಧಿಕಾರಿಯು ಪ್ರಮಾಣೀಕರಿಸಿದ ತರುವಾಯ ಮಾತ್ರ ಯಾವುದೇ ಇತರ ವ್ಯವಹರಣೆಗಳನ್ನು ಕೈಗೊಳ್ಳಬಹುದು.

**5. ನಿಯಮವನ್ನು ರಚಿಸಲು ಅಧಿಕಾರ.–** ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನದ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ

ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**6. ನಿರಸನ ಮತ್ತು ಸಿಂಧುತ್ವ, ಇತ್ಯಾದಿ.–** (1) ಕರ್ನಾಟಕ ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1976 (ಕರ್ನಾಟಕ ಅಧಿನಿಯಮ ಸಂಖ್ಯೆ 1976ರ 79) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶವೇನೇ ಇದ್ದರೂ, ಕರ್ನಾಟಕ ಸಾರ್ವಜನಿಕ ಹಣ (ಬಾಕಿ ವಸೂಲಿ) ಅಧಿನಿಯಮ, 1976ರ ಮೇರೆಗೆ (ಇಲ್ಲಿ ಇನ್ನು ಮುಂದೆ 1976ರ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಮಾಡಿದ ಯಾವುದೇ ಕಾರ್ಯವು ಅಥವಾ ಕೈಗೊಂಡ ಯಾವುದೇ ಕ್ರಮವು (ಯಾವುದೇ ಮೊಬಲಗನ್ನು ವಸೂಲು ಮಾಡಲು ಮಾಡಿದ ನಿಯಮಗಳು ಅಥವಾ ಆದೇಶಗಳು ಹೊರಡಿಸಿದ ನೋಟೀಸುಗಳು ಅಥವಾ ಪ್ರಮಾಣ ಪತ್ರಗಳು ಮತ್ತು ಪ್ರಾರಂಭಿಸಿದ ಕ್ರಮಗಳೂ ಸೇರಿದಂತೆ) ಅಥವಾ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯವು ಅಥವಾ ಕ್ರಮವು, ಅಂಥ ಕಾರ್ಯವನ್ನು ಅಥವಾ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದ್ದರೆ ಅಥವಾ ಕೈಗೊಳ್ಳಲಾಗಿದ್ದರೆ ಹೇಗೋ ಹಾಗೆ ಸಿಂಧುವಾಗಿದೆಯೆಂದು ಅಥವಾ ಪರಿಣಾಮಕಾರಿಯಾಗಿದೆಯೆಂದು ಭಾವಿಸತಕ್ಕದ್ದು. ಈ ಅಧಿನಿಯಮದ 1ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ 1976ರ ಜೂನ್ 15ನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ 1976ರ ಅಧಿನಿಯಮವನ್ನು ರಾಷ್ಟ್ರಪತಿಯವರ ಸಮ್ಮತಿಗಾಗಿ ಕಾಯ್ದಿರಿಸಿಲ್ಲದಿರುವುದರಿಂದ ಮತ್ತು ರಾಷ್ಟ್ರಪತಿಯವರ ಸಮ್ಮತಿ ಪಡೆದಿಲ್ಲದಿರುವುದರಿಂದ ಸದರಿ ಅಧಿನಿಯಮವು ಸಂವಿಧಾನ ಬಾಹಿರವಾಗಿದೆ ಎಂಬ ಅಥವಾ ಶೂನ್ಯವಾಗಿದೆ ಎಂಬ ಕಾರಣದ ಮೇಲೆ 1976ರ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಕೈಗೊಂಡ ಅಥವಾ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಅಥವಾ ಕ್ರಮದ ಸಿಂಧುತ್ವವನ್ನು ಪ್ರಶ್ನಿಸಿ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ.

The above translation of the Karnataka Public Moneys (Recovery of Dues) Act, 1979 (Karnataka Act 16 of 1980) shall be authoritative text in the Kannada Language under section 5A of the Karnataka Official Language Act, 1963.

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 524

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.